<u>ಸಾಕ್ಷಿಯನ್ನು ದಿಃ**12.03.2025** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಶ್ರೀ.ಕೆ.ಆರ್.ಎಲ್. ವಕೀಲರಿಂದ:</u>

ನನ್ನ ತಾಯಿಯ ಮನೆ ಹೊನ್ನುಡಿಕೆ. ದಾನಪತ್ರದ ಪೂರ್ವದ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾನಪತ್ರದ ಹಿಂದಿನ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು ಕೇವಲ ದಾನಪತ್ರ ಮತ್ತು ಮುನ್ಸಿಪಲ್ ದಾಖಲೆಗಳನ್ನು ನೋಡಿ ಆಸ್ತಿ ಖರೀದಿ ಮಾಡಿರುತ್ತೇನೆ. 2 ನೇ ಪ್ರತಿವಾದಿ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಕ್ರಯ ಪತ್ರದ ಕಾಲಕ್ಕೆ 2 ನೇ ಪ್ರತಿವಾದಿ ಮೈಸೂರಿನಲ್ಲಿ ವಾಸವಿದ್ದರು. ನಿಡಿ.1 ಕ್ಕೆ ಉಭಯ ಪಕ್ಷಗಾರರು ಮಾಹಿತಿ ನೀಡಿರುತ್ತೇವೆ. ನಿಡಿ.1 ರ 3 ನೇ ಪುಟದಲ್ಲಿರುವ ವಿವರವನ್ನು 1 ಮತ್ತು 3 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ಮತ್ತು ನಾನು ಹೇಳಿ ಬರೆಸಿರುತ್ತೇವೆ. ನಿಡಿ.1 ರಲ್ಲಿ 1 ನೇ ಪ್ರತಿವಾದಿಯ ಗಂಡ ಖರೀದಿ ಮಾಡಿದ ಆಸ್ತಿ ಎಂದು ಬರೆದಿದೆ ಎಂದರೆ ಸರಿಯಲ್ಲ.

ಆಸ್ತಿ ಖರೀದಿ ಮಾಡುವ ಮೊದಲು ಅದು ಸ್ವಯಾರ್ಜಿತವೇ ಅಥವಾ ಪಿತ್ರಾರ್ಜಿತವೇ ಎಂದು ಪರಿಶೀಲಿಸುವುದು ನಮ್ಮ ಕರ್ತವ್ಯ ಎಂದರೆ ಸರಿ. ದಾವಾ ಆಸ್ತಿ ಪ್ರತಿವಾದಿಗಳ ಸ್ವಯಾರ್ಜಿತವೇ ಅಥವಾ ಪಿತ್ರಾರ್ಜಿತವೇ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಕುಣಿಗಲ್ ನ ಕೇಂದ್ರಭಾಗದಿಂದ ಸ್ವಲ್ಪ ಅಂತರದಲ್ಲಿದೆ ಎಂದರೆ ಸರಿ. ದಾವಾ ಆಸ್ತಿಗೆ ನ್ಯಾಯಾಲಯದಿಂದ 15 ನಿಮಿಷಗಳು ಆಗಬಹುದು. ದಾವಾ ಆಸ್ತಿಗೆ ¼

ಕಿ.ಮೀ. ಅಂತರವಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಹೆಚ್ಚು ಬೆಲೆ ಬಾಳಬಹುದು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಮಾರುಕಟ್ಟೆ ಮೌಲ್ಯ ನಿಡಿ.1 ರ ವೇಳೆಗೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮಾರುಕಟ್ಟೆ ಮೌಲ್ಯ ಲಕ್ಷಗಳಲ್ಲಿತ್ತು ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಗೆ ಬಿ.ಪಿಎಲ್. ಕಾರ್ಡ್ ಇದೆ ಎಂದು ಗೊತ್ತಿದ್ದು, ಅದರಲ್ಲಿ ಯಾರು ಸದಸ್ಯರಿದ್ದಾರೆ ಎಂದು ನನಗೆ ಗೊತ್ತಿಲ್ಲ. 2002 ಕ್ಕಿಂತ ಮುಂಚೆ ನಾನು ಬಿ.ಪಿ.ಎಲ್. ಕಾರ್ಡ್ ನ್ನು ನಾನು ನೋಡಿರುತ್ತೇನೆ. 3 ನೇ ಪ್ರತಿವಾದಿಯವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗುವ ಮೊದಲು ದಾವಾ ಆಸ್ತಿ ಯಾರ ಹೆಸರಿನಲ್ಲಿ ಖಾತೆಯಾಗಿತ್ತು ಎಂದು ನಾನು ನೋಡಿರುವುದಿಲ್ಲ. ನಿಡಿ.1 ರ ವೇಳೆಯಲ್ಲಿ ಸದರಿ ಆಸ್ತಿ ಖಾಲಿ ಜಾಗವಾಗಿತ್ತು.

ನನ್ನ ಕ್ರಯದ ವೇಳೆಯಲ್ಲಿ 2 ನೇ ಪ್ರತಿವಾದಿಯನ್ನು ಖರೀದಿಗೆ ತಕರಾರು ಇದೆಯೇ ಎಂದು ವಿಚಾರಿಸಿದ್ದೆ. 2 ನೇ ಪ್ರತಿವಾದಿಯನ್ನು ಕ್ರಯಕ್ಕೆ ಸಹಿ ಮಾಡಲು ಕೇಳಿಕೊಂಡಿದ್ದೆ. 2 ನೇ ಪ್ರತಿವಾದಿಯನ್ನು ನಾನು ಎಂದಿಗೂ ವಿಚಾರಿಸಿರುವುದಿಲ್ಲ ಮತ್ತು ಸಹಿ ಮಾಡಲು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ 2 ನೇ ಪ್ರತಿವಾದಿ ಮತ್ತು ವಾದಿಗಳಿಗೆ ಸೇರಿದ್ದರೂ ನಕಲಿ ದಾನಪತ್ರದ ಆಧಾರದ ಮೇಲೆ ಕ್ರಯ ಪತ್ರ

ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರ ಊರ್ಜಿತವಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಮತ್ತು 2 ನೇ ಪ್ರತಿವಾದಿಗೆ ಮೋಸಮಾಡಲೆಂದು ಕ್ರಯ ಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ಮತ್ತು 2 ನೇ ಪ್ರತಿವಾದಿಗೆ ಕೇವಲ ದಾವಾ ಆಸ್ತಿಯ ಮೇಲೆ ಹಕ್ಕಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.